

**ಟಿ.ಆರ್. ಉಷಾರಾಣಿ**
ಚಿತ್ರ: ಸಂತೋಷ್ ಸಸಿಹಿತ್ಲು

# ಗೂಡು ತೊರೆದ ಹಕ್ಕಿ

'ಏಯ್ ನಿಲ್ಲು. ನೀನು ಮೆಹರುನ್ನೀಸ ಅಲ್ವಾ?' 'ಯಾರು? ಯಾರು ನೀವು. ನಾನು ಮಾನಸ'

'ಏಯ್ ಕಳ್ಳಿ ನೀನು ಸುಳ್ಳು ಹೇಳಿದರೆ ನನಗೆ ತಿಳಿಯುವುದಿಲ್ಲವಾ? ನೀನು ಖಂಡಿತವಾಗಿಯೂ ಮೆಹರುನ್ನೀಸಾನೇ. ನಾನು ನೀನು ಎರಡು ವರ್ಷಗಳ ಕಾಲ ಕಾಲೇಜಿನ ಹಾಸ್ಟೆಲ್‌ನಲ್ಲಿ ರೂಂಮೇಟ್ಸ್ ಆಗಿದ್ದವರು. ನಿನ್ನ ಬಗ್ಗೆ ನನಗೆ ಚೆನ್ನಾಗಿ ತಿಳಿದಿದೆ. ನಾನು ನಿನ್ನನ್ನು ಪ್ರೀತಿಯಿಂದ ಮೆಹರ್ ಎನ್ನುತ್ತಿದ್ದೆ. ನೀನು ನನ್ನನ್ನು ಸುಜಿ ಎನ್ನುತ್ತಿದ್ದೆ. ಈಗ ನೆನಪಾಯಿತೆ?'

'ಇಲ್ಲವಲ್ಲಾ. ನೀವ್ಯಾರೋ ನನಗೆ ತಿಳಿಯದು. ನನ್ನ ಧರ್ಮವನ್ನೇ ಬದಲಾಯಿಸುತ್ತಿದ್ದೀರಿ. ಬಹುಶಃ ನಿಮ್ಮ ಗೆಳತಿ ನನ್ನಂತಿರಬೇಕು. ಅದಕ್ಕೆ ನೀವು...'

'ಅನುಮಾನವೇ ಇಲ್ಲ ನೀನು ಮೆಹರ್' ಅಚಾನಕ್ಕಾಗಿ ಸುಜಾತ ಅವಳ ಕೈ ಹಿಡಿದಳು.

'ಇದೇನಿದು ಹುಡುಗಾಟ ಬಿಡಿ ನನ್ನ ಕೈಯಿ ಬಿಡಿ. ನಾನು ಹೋಗಬೇಕು. ಹೊತ್ತಾಗುತ್ತದೆ.'

ಅವಳು ಕೈಗಳನ್ನು ಬಿಡಿಸಿಕೊಂಡು ಸರಸರ ಹೆಜ್ಜೆ ಹಾಕಿ ಹೋಗಿಯೇಬಿಟ್ಟಳು. ಸುಜಾತಳಿಗಾದ ನಿರಾಸೆ ಅಷ್ಟಿಷ್ಟಲ್ಲ. ಅದೆಷ್ಟು ಬಾರಿ ಇಬ್ಬರೂ ಕೈ ಕೈ ಹಿಡಿದುಕೊಂಡು ಓಡಾಡಿಲ್ಲ! ಒಟ್ಟಿಗೆ ಕ್ಲಾಸಿನಲ್ಲಿ ಪಕ್ಕ ಪಕ್ಕದಲ್ಲಿ ಕುಳಿತು ಹರಟೆ ಹೊಡೆದಿಲ್ಲ! ಒಂದೇ ಐಸ್ ಕ್ರೀಂ ಇಬ್ಬರೂ ಚೀಪಿಲ್ಲ. ಬಟ್ಟೆಗಳನ್ನು ಬದಲಾಯಿಸಿಕೊಂಡು ಹಾಕಿಕೊಂಡಿಲ್ಲ, ಒಬ್ಬರಿಗಾಗಿ ಮತ್ತೊಬ್ಬರು ನೋಟ್ಸ್ ಕಾಪಿ ಮಾಡಿಲ್ಲ, ಈಗ ಅವಳು ಗುರುತೇ ಇಲ್ಲಾ ಎನ್ನುವಂತೆ ನಟಿಸುತ್ತಿದ್ದಾಳಲ್ಲ. ಅಥವಾ ಅವಳಲ್ಲದೆಯೂ ಇರಬಹುದು. ಮೆಹರ್ ಇದ್ದಕ್ಕಿದ್ದಂತೆ ಮಾನಸ ಹೇಗಾಗುತ್ತಾಳೆ? ನನ್ನ ಕಣ್ಣೇ ನನಗೆ ಮೋಸ ಮಾಡುತ್ತಿದೆಯೇ? ಸುಜಾತ ಅರ್ಥವಾಗದವಳಂತೆ ನೋಡುತ್ತಾ ನಿಂತುಬಿಟ್ಟಳು. ಅವಳ ಮುಂದೆಯೇ ಅವಳ ಮನೆಯವರೆಗೂ ಹೋಗುವ ಬಸ್ಸು ಬಂತು ಹೋಯ್ತು. ಅವಳು ಮಾತ್ರ ಶಿಲಾವಿಗ್ರಹದಂತೆ ಕುಳಿತೇ ಇದ್ದಳು. ಅವಳೊಂದಿಗೆ ಅದೆಷ್ಟು ನೆನಪುಗಳು. ಮೆಹರುನ್ನೀಸ ಜೀವನದ ಒಂದು ಭಾಗವಾಗಿ ಬಿಟ್ಟಿದ್ದಳು. ಬಿ.ಎಸ್ಸಿ ಮುಗಿಯುವ ಮೊದಲೇ ತನಗೆ ಮದುವೆ, ಗಂಡು ಗೊತ್ತಾಗಿದೆ ಎಂದಳು. ಇನ್ನೂ ಒಂದು ಸೆಮಿಸ್ಟರ್ ಬಾಕಿ ಇತ್ತು. 'ಅಲ್ವೇ ನೀನಗೇನೂ ಹುಚ್ಚೇ? ಇಷ್ಟೆಲ್ಲಾ ಓದಿ ಕೊನೆಯ ಸೆಮಿಸ್ಟರ್ ಹೊತ್ತಿಗೆ ವಿದ್ಯೆಗೆ ತಿಲಾಂಜಲಿ ಕೊಡುತ್ತೀಯ?' ಎಂದು ಬೈದಿದ್ದಳು ಸುಜಾತ.

'ಅಯ್ಯೋ ನಮ್ಮ ಜನದಲ್ಲಿ ಹಾಗೇ ಕಣೆ. ಮದುವೆ ಮಾಡಿಬಿಟ್ಟರೆ ತಮ್ಮ ಜವಾಬ್ದಾರಿ ಮುಗಿಯಿತು ಎನ್ನುವವರೆ ಹೆಚ್ಚು.'

'ಇಷ್ಟೆಲ್ಲಾ ಓದಿ ಏನು ಬಂತು ಲಾಭ. ನೀನು ವಿರೋಧಿಸಬೇಕು ತಾನೇ? ಸ್ತ್ರೀ ಸ್ವಾತಂತ್ರ್ಯ, ಸಬಲೀಕರಣ ಎಂದೆಲ್ಲಾ ಓದಿ ಇಷ್ಟೇನೇ?'

'ಅದೆಲ್ಲ ಪುಸ್ತಕದಲ್ಲಿ ಸುಜಿ. ನಮ್ಮ ಹಳ್ಳಿಯಲ್ಲಿ ಕಾಲೇಜು ಇರಲಿಲ್ಲ, ಅದಕ್ಕೆ ನನ್ನ ಬಲವಂತಕ್ಕೆ ಹಾಸ್ಟೆಲ್‌ನಲ್ಲಿ ಓದಿಸಿದರು. ಅಷ್ಟೇ ಕಣೆ ನನಗೆ ಲಾಭ.'

'ನೀನು ಆರ್ಥಿಕವಾಗಿ ಸಬಲಳಾಗಬೇಕು. ಸರಿ ನಿನ್ನ ಗಂಡನಾಗುವವನಿಗೆ ಏನು ಕೆಲಸ?'